


ಮತ್ತು ನಿಸರ್ಗದ ಏರುಪೇರುಗಳ ಹಿನ್ನೆಲೆಗಳಲ್ಲಿ ಕಾಣಿಸಿದ್ದರೆ ಆಶ್ಚರ್ಯವಲ್ಲ. ಇದರಲ್ಲಿ ಲಂಕೇಶ್ ಎಲ್ಲ ರೀತಿಯಲ್ಲಿ ಯಶಸ್ವಿಯಾಗಿದ್ದಾರೆಯೇ ಎಂಬುದು ಬೇರೆ ಮಾತು. ಆದರೆ, ಅವರ ಕಥನಗಳು ಕೊನೆತನಕ ಮನುಷ್ಯನನ್ನು ಪರೀಕ್ಷಿಸಿದ ಬಗೆಗಳು, ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ಗ್ರಹಿಸಿದ ನೋಟ, ಕರ್ನಾಟಕದ ಆ ಮೂಲಕ ಭಾರತದ ಬಹುರೂಪಿತನಗಳನ್ನು ತಮ್ಮ ಪಾತ್ರಗಳ ಮುಖೇನ ಕಂಡ ನೋಟಕ್ರಮಗಳು, ಮನುಷ್ಯ ತನ್ನ ಒಂಟಿತನಗಳನ್ನು ಪಾರಾಗಿಸುವಲ್ಲಿ ಮತ್ತು ಪಕ್ಕಾಗಿಸುವಲ್ಲಿ ಹಲವು ಬಾರಿ ಕಾಮಕ್ಕೆ ಮಾರುಹೋಗುವುದು, ಅಮೂರ್ತವಾಗಿಯೇ ಬೆಚ್ಚಿಬೀಳಿಸುವ ಮನುಷ್ಯನ ಆಂತರಂಗಿಕ ತತ್ವಜ್ಞಾನದ ಮಾತುಗಳು, ಗ್ರಾಮರಾಜಕಾರಣದ ಅಗ್ನಿಕುಂಡದಂತಹ ಒಳಸತ್ಯಗಳು – ಇವೆಲ್ಲವೂ ಲಂಕೇಶರನ್ನು ಅವರ ಸಮಕಾಲೀನ ಬರಹಗಾರರಗಿಂತ ಕೊಂಚ ಭಿನ್ನವಾಗಿಸಿವೆ. ಭಾಷೆ, ನುಡಿಗಟ್ಟು ತಂತ್ರಗಳು, ಮತ್ತು ಅವರ ಪಾತ್ರಗಳ ಆಲೋಚನೆಗಳು ಬದಲಾದಂತೆ ಮತ್ತು ಸಾಮಾಜಿಕ ತೀವ್ರತೆಗಳು ಪಲ್ಲಟಗೊಂಡಂತೆ ಲಂಕೇಶರ ಕಥನಗಾರಿಕೆಯೂ ಜಿಗಿತಗಳನ್ನು ಕಂಡಿದೆ. ಈ ಜಿಗಿತಗಳು ಸಾಂಸ್ಕೃತಿಕ ಪ್ರಜ್ಞೆಯನ್ನು ಮಾಗಿಸುತ್ತಾ ಹೋಗಿವೆ. ಅವರ ಪತ್ರಿಕಾಲೋಕವೂ ಕೂಡ ಕಥನಗಾರಿಕೆಯ ಒಳಗೂಢಗಳನ್ನು ಹಾಗೂ ಮನುಷ್ಯ ಮತ್ತು ಸಮಾಜದ ಸತ್ಯಗಳನ್ನು ಮತ್ತಷ್ಟು ವಾಸ್ತವವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಸಿದೆ.

ಮೇಲಿನ ವಿಚಾರಗಳನ್ನು ಹಿಂದಿನ ವಿಮರ್ಶಕರು ಹೇಳಿಲ್ಲ ಎಂಬ ಹುಂಬ ನಿಲುವು ನನ್ನದಲ್ಲ; ಬದಲಿಗೆ ಕಾಲಕ್ಕೆ ತಕ್ಕಂತೆ ವಿಸ್ತರಿಸುವ ಜವಾಬ್ದಾರಿಗಳು